ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ವನ್ಯಜೀವಿ ಸಂರಕ್ಷಣೆ ಬಗ್ಗೆ

ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-

773 (851) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇತ್ತೀಚೆಗೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲಿ ಸಾವನ್ನಪ್ಪಿದ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಘಟನೆಗಳಿಗೆ ಕಾರಣಗಳೇನು ; ಇದ್ದರೆ, ಯಾರು ಜವಾಬ್ದಾರರು ; ವನ್ಯಜೀವಿ ಸಂರಕ್ಷಣೆಗೆ ನೇಮಿಸಿರುವ ಅರಣ್ಯಾಧಿಕಾರಿಗಳು ಮತ್ತು ಅರಣ್ಯ ಕಾವಲಿಗರು ದಿನ ನಿತ್ಯ ನಿರ್ವಹಿಸಿದ ದಿನಚರಿ ಹಾಗೂ ನಿಯೋಜಿಸಿದ ಕರ್ತವ್ಯಗಳ ವಿವರಗಳನ್ನು ಚಾಲನಾ ಪುಸ್ತಕದ ಆಯ್ದ ಭಾಗದ ನಕಲು ಪ್ರತಿ ಸಮೇತ ನೀಡುವುದು ;

(ಇ) ಅರಣ್ಯಾಧಿಕಾರಿಗಳು ಮತ್ತಿತರ ಅಧಿಕಾರಿ/ಸಿಬ್ಬಂದಿಗಳು ಪ್ರತಿದಿನ ಸಂಜೆ ಸ್ಥಳ ನಿಯುಕ್ತಿಗೊಳಿಸಲಾದ ಸ್ಥಳವನ್ನು (ಕೇಂದ್ರಸ್ಥಾನ) ಬಿಡುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸಂಕ್ಷಿಪ್ತ ಮಾಹಿತಿ ಒದಗಿಸುವುದು ?